# ಉತ್ತಮ ವಿದ್ಯಾರ್ಥಿಯ ಲಕ್ಷಣಗಳು

ಬ್ರಹ್ಮಚಾರಿ ಪ್ರಣವಚೈತನ್ಯ

ಉತ್ತಮ ಜ್ಞಾನ ಮೂಡಿ ಬರಬೇಕಾದರೆ ಗುರು-ಶಿಷ್ಯ ಇಬ್ಬರೂ ಸಮರ್ಥರಾಗಿರಬೇಕು ಎಂಬ ಮಾತಿದೆ. ವಿದ್ಯಾರ್ಥಿ ಅತ್ಯುತ್ತಮನಾಗಿದ್ದರೆ ಅವನು ಗಳಿಸುವ ಜ್ಞಾನ ಉನ್ನತ ಮಟ್ಟದ್ದಾಗಿರುತ್ತದೆ. ಇಂತಹ ಜ್ಞಾನವನ್ನು ಗಳಿಸಿದಾಗಲೇ ವ್ಯಕ್ತಿಯೊಬ್ಬ ಯಶಸ್ಸನ್ನು ಕಾಣಬಲ್ಲ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಬಹಳಷ್ಟು ವಿದ್ಯಾರ್ಥಿಗಳು ಅಧ್ಯಯನದಲ್ಲಿ ಆಸಕ್ತಿ ಮೂಡುತ್ತಿಲ್ಲ ಎಂದು ದೂರುತ್ತಾರೆ. ಮೊಬೈಲ್ ಅಥವಾ ವೀಡಿಯೋ ಗೇಮ್ ಹಿಡಿದರೆ ಬಿಡಲೇ ಮನಸ್ಸಾಗದು ಎನ್ನುತ್ತಾರೆ. ಆದರೆ ಈ ಸಮಸ್ಯೆಗೆ ಮೂಲಕಾರಣವೇನು ಎಂದು ಆಲೋಚಿಸುವ ಪ್ರಯತ್ನವನ್ನೇ ಮಾಡುವುದಿಲ್ಲ. ಮಕ್ಕಳಿಗೆ ''ಚೆನ್ನಾಗಿ ಓದಬೇಕು'' ಎನ್ನುತ್ತೇವೆ. ಆತ ಪ್ರಶ್ನಿಸುತ್ತಾನೆ ''ಏಕೆ?'' ಎಂದು. ''ಚೆನ್ನಾಗಿ ಓದಿದರೆ ಮುಂದೆ ಉತ್ತಮ ಉದ್ಯೋಗ ದೊರೆತು, ಚೆನ್ನಾಗಿ ಹಣ ಸಂಪಾದಿಸಿ, ಸುಖವಾಗಿರಬಹುದು'' ಎನ್ನುತ್ತೇವೆ. 'ಇಷ್ಟೆಲ್ಲ ಕಷ್ಟಪಟ್ಟು ಓದಿ, ಮುಂದೆ ಎಂದೋ ಭವಿಷ್ಯದಲ್ಲಿ ಸುಖವಾಗಿರುವ ಬದಲು, ಈಗಲೇ ಮೊಬೈಲಿನಲ್ಲಿ ವೀಡಿಯೋ ನೋಡುವ ಮೂಲಕವೋ, ಹರಟೆ-ನಿದ್ರೆಗಳ ಮೂಲಕವೋ, ಆಮೋದ-ಪ್ರಮೋದಗಳ ಮೂಲಕವೋ ಸುಖವಾಗಿರಬಹುದಲ್ಲ' ಎಂಬುದೇ ವಿದ್ಯಾರ್ಥಿಗಳ ಒಳಮನಸ್ಸು ಒಡ್ಡುವ ತರ್ಕ. ಈ ತರ್ಕಕ್ಕೆ ಸೂಕ್ತ ಪ್ರತ್ಯುತ್ತರ ದೊರಕದ ಕಾರಣ ಹೊರಗಿನ ಬಲವಂತದಿಂದ ಕಿಂಚಿತ್ತು ಓದುತ್ತಾರಾದರೂ, ಅಧ್ಯಯನ ಮಾತ್ರ ಪರಿಣಾಮಕಾರಿಯಾಗುವುದಿಲ್ಲ.

ಹಾಗಾದರೆ ಈ ಸಮಸ್ಯೆಗೆ ಪರಿಹಾರವೇನು? ಎಲ್ಲಿಯವರೆಗೆ ಹಣದಿಂದ ಬರುವ ಸುಖವೇ ಜೀವನದ ಉದ್ದೇಶ ಎಂಬ ಬೋಧನೆ ನಾವು ನೀಡುತ್ತೇವೆಯೋ ಅಲ್ಲಿಯವರೆಗೆ ಇದಕ್ಕೆ ಪರಹಾರವಿಲ್ಲ. ಹಣ ಬೇಕು — ನಿಜವೇ. ಆದರೆ ಜೀವನದಲ್ಲಿ ಸಾಧಿಸಲು ಇನ್ನೂ ಬಹಳಷ್ಟಿದೆ. ಸ್ವಾವಲಂಬಿಯಾಗಿ, ಪಾರತಂತ್ರ್ಯಕ್ಕೆ ಒಳಗಾಗದೆ, ಆತ್ಮಾಭಿಮಾನದಿಂದ ಬದುಕುವ ಆಸೆ ಉಂಟಾದರೆ ಎಂತಹ ನಿರಕ್ಷರಕುಕ್ಷಿ ಕೂಡ ಜ್ಞಾನಲಾಭಕ್ಕಾಗಿ ಹಾತೊರೆಯಲಾರಂಭಿಸುತ್ತಾನೆ. ''ನಾನು ಕೇವಲ ಹೊಟ್ಟೆಹೊರೆಯಲಿಕ್ಕಾಗಿ ಅಥವಾ ಸ್ವ-ಸುಖಕ್ಕಾಗಿ ಬದುಕದೆ ಸಮಾಜಕ್ಕೊಂದು ಮಾದರಿಯಾಗಬೇಕು'' ಎಂಬ ತವಕ ಉಂಟಾದರೆ ಎಂತಹ ಪಾಮರನೂ ಪಂಡಿತನಾಗಲು ಪ್ರಯತ್ನಿಸುತ್ತಾನೆ. 'ನಾನು ಕೇವಲ ಬದುಕನ್ನು **ಸವೆಸು**ವಂತಾಗಬಾರದು, ಬದುಕನ್ನು **ಬಾಳು**ವಂತಾಗ ಬೇಕು' — ಈ ಧ್ಯೇಯವಾಕ್ಯವೇ ವಿದ್ಯಾರ್ಥಿಗೆ ಸ್ಫೂರ್ತಿ ನೀಡುವುದು. ಉತ್ತಮ ವಿದ್ಯಾರ್ಥಿಯಲ್ಲಿ ಮುಖ್ಯವಾಗಿ ಇರಬೇಕಾದದ್ದು ಈ ಸ್ಫೂರ್ತಿ. ಆಗ ಆತ ಪ್ರತಿಯೊಬ್ಬ ವ್ಯಕ್ತಿಯಿಂದಲೂ, ಪ್ರತಿಯೊಂದು ಪರಿಸ್ಥಿತಿಯಿಂದಲೂ ಕಲಿಯಲು ಪ್ರಾರಂಭಿಸುತ್ತಾನೆ. ತನ್ಮೂಲಕ ಧನ್ಯತೆಯನ್ನು ಹೊಂದುತ್ತಾನೆ.

ಉತ್ತಮ ವಿದ್ಯಾರ್ಥಿಗೆ ಇರಬೇಕಾದ ಲಕ್ಷಣಗಳನ್ನು ೧೨ ಅಂಶಗಳಲ್ಲಿ ಅಡಕವಾಗಿಸಬಹುದು. ಈ ೧೨ ಅಂಶಗಳನ್ನು ವಿಶದವಾಗಿ ಚರ್ಚಿಸುವುದೇ ಈ ಲೇಖನದ ಉದ್ದೇಶ.

**೧. ದೈಹಿಕ ಪ್ರಸ್ತುತಿ** : ದೈಹಿಕ ಪ್ರಸ್ತುತಿ ಎಂದರೆ ಆತನ ಮೈಬಣ್ಣ ಹೇಗಿದೆ, ಎತ್ತರ ಹೇಗಿದೆ ಎಂದಲ್ಲ. ಬದಲಾಗಿ, ಒಬ್ಬ ವ್ಯಕ್ತಿಯನ್ನು ನೋಡಿದಾಗ ನಮಗೆ ಆತನಲ್ಲಿ , ''ಈತ ಈ ಕಾರ್ಯವನ್ನು ಸಾಧಿಸಬಲ್ಲ'' ಎಂಬ ವಿಶ್ವಾಸ ಮೂಡುವಂತಾಗಬೇಕು. ಸಂದರ್ಶನದ ಸಮಯದಲ್ಲಿ ಎಲ್ಲ ಉದ್ಯೋಗ ಸಂಸ್ಥೆಗಳು ಮೊದಲು ಗಮನಿಸುವುದೇ ಇದನ್ನು. 'First impression is best impression' (ಮೊದಲ ಪ್ರಭಾವವೇ ಅತ್ಯುತ್ತಮ ಪ್ರಭಾವ) ಎಂಬ ಮಾತಿದೆ. ಈ 'ಮೊದಲ ಪ್ರಭಾವ' ನೀಡುವುದೇ ದೈಹಿಕ ಪ್ರಸ್ತುತಿ. ಅದು ಚೆನ್ನಾಗಿರಲು ದಿನನಿತ್ಯ ಯೋಗ, ವ್ಯಾಯಾಮ, ಕ್ರೀಡೆಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಪೌಷ್ಟಿಕ ಆಹಾರದ ಕಡೆಗೆ ಗಮನ ನೀಡಬೇಕಾಗುತ್ತದೆ. ನಮ್ಮೆಲ್ಲ ಸಮಸ್ಯೆಗೆ ದೈಹಿಕ ದುರ್ಬಲತೆಯೇ ಪ್ರಮುಖ ಕಾರಣ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ದೇಹ ಬಲಿಷ್ಠವಾಗಿಲ್ಲದ ಪಕ್ಷದಲ್ಲಿ ನಾವು ನಮ್ಮ ದಿನನಿತ್ಯದ ಸಮಸ್ಯೆಯಲ್ಲಿಯೇ ತೊಳಲುತ್ತಿರಬೇಕಾಗುತ್ತದೆ. ಆದ್ದರಿಂದ ದೈಹಿಕ ಸದೃಢತೆ ಉತ್ತಮ ಶಿಕ್ಷಣದ ಮೊದಲ ಹಂತ ಹಾಗೂ ಇದೇ ಉತ್ತಮ ವಿದ್ಯಾರ್ಥಿಯ ಪ್ರಮುಖ ಆದ್ಯತೆಯಾಗಿರಬೇಕು.

**೨. ಸ್ವಭಾವ ನಿಯಂತ್ರಣ** : ವಿದ್ಯಾರ್ಥಿಗಳು ಪುಸ್ತಕದ ಜೊತೆಗೆ ತಮ್ಮ ಸ್ವಭಾವವನ್ನೂ ಅಧ್ಯಯನ ಮಾಡಬೇಕು. ದುರದೃಷ್ಟವಶಾತ್ ಈ ರೀತಿಯ ಅಧ್ಯಯನ ನಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಕಾಣಸಿಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವವೂ ಭಿನ್ನ. ಒಬ್ಬನಿಗೆ ತುಂಬ ಸಿಟ್ಟು, ಮತ್ತೊಬ್ಬ ತುಂಬ ಶಾಂತ. ಇನ್ನೊಬ್ಬನಿಗೆ ಯಾವಾಗಲೂ ಗಡಿಬಿಡಿ, ಮಗದೊಬ್ಬ ತುಂಬ ನಿಧಾನ. ಕೆಲವರದು ಮಾತು ಕಡಿಮೆ, ವಾಚಾಳಿ ಇನ್ನೊಬ್ಬ. ಒಬ್ಬ ಅಂತರ್ಮುಖಿ, ಒಬ್ಬ ಬಹಿರ್ಮುಖಿ. ನಮ್ಮ ನಮ್ಮ ಸ್ವಭಾವವನ್ನು

ನಾವು ಗಮನಿಸಬೇಕು ಹಾಗೂ ಪರಿಸ್ಥಿತಿಗೆ ತಕ್ಕಂತೆ ಅದನ್ನು ನಿಯಂತ್ರಿಸುವಂತಾಗಬೇಕು. ಇದು ಶಿಕ್ಷಣದ ಮುಖ್ಯ ಉದ್ದೇಶ.

''ನನಗೆ ಕೋಪ ಜಾಸ್ತಿ. ಇದರಿಂದಾಗಿ ಇತರರೊಂದಿಗೆ ಹೊಂದಿಕೊಂಡು ಬದುಕಲು ನನಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಾನು ಕೋಪವನ್ನು ನಿಯಂತ್ರಿಸುತ್ತೇನೆ'' — ಹೀಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಸ್ವಭಾವದ ಮೇಲೆ ನಿಯಂತ್ರಣ ಸಾಧಿಸಲು ಕಲಿಯಬೇಕು. ಕೆಲವರು ತುಂಬ ಅಂಕವನ್ನೇನೋ ಗಳಿಸುತ್ತಾರೆ. ಆದರೆ ಉದ್ಯೋಗ ಅಥವಾ ವ್ಯವಹಾರ ಕ್ಷೇತ್ರದಲ್ಲಿ ವಿಫಲರಾಗುತ್ತಾರೆ. ಎಲ್ಲರೊಂದಿಗೆ ವೈಮನಸ್ಯಕ್ಕೆ ತುತ್ತಾಗಿ ನರಳುತ್ತಾರೆ. ಇದಕ್ಕೆ ಕಾರಣ ಸ್ವಭಾವ ನಿಯಂತ್ರಣದ ಕೊರತೆ. ನಮ್ಮ ಸ್ವಭಾವ ನಮ್ಮನ್ನು ನಿಯಂತ್ರಿಸಲು ಬಿಡದೆ, ಅದನ್ನು ನಾವು ನಿಯಂತ್ರಿಸಲು ಕಲಿಯಬೇಕು.

**೩. ಆಸಕ್ತಿ ಗುರುತಿಸುವುದು :** ಬಹಳಷ್ಟು ಜನ ತಮ್ಮ ವೃತ್ತಿ ಜೀವನದಲ್ಲಿ ಆನಂದದಿಂದ ಇರುವುದಿಲ್ಲ. ಏಕೆಂದರೆ ಅವರು ಆ ಉದ್ಯೋಗಕ್ಕೆ ಇಷ್ಟಪಟ್ಟು ಬಂದಿರುವುಲ್ಲ. ನಮ್ಮ ಆಸಕ್ತಿ ಗುರುತಿಸಿ, ಅದಕ್ಕೆ ತಕ್ಕ ಉದ್ಯೋಗದಲ್ಲಿ ತೊಡಗುವುದು ಬಹಳ ಮುಖ್ಯ. ಆಗ ಮಾತ್ರವೇ ನಮಗೆ ಸಂತೃಪ್ತಿ ದೊರಕುತ್ತದೆ. ನಮ್ಮ ಆಸಕ್ತಿಯನ್ನು ಗುರುತಿಸಲು ಈ ಕೆಳಕಂಡ ಅಂಶ ನೆರವಾಗಬಹುದು.

**ಅ) ಮಾತಿನ ಕಲೆ:** ಕೆಲವರು ಚೆನ್ನಾಗಿ ಉಪನ್ಯಾಸ ಮಾಡಬಲ್ಲರು, ಪ್ರಬಂಧ ಬರೆಯಬಲ್ಲರು. ಇವರಿಗೆ ಭಾಷಾಶಾಸ್ತ್ರದಲ್ಲಿ ಆಸಕ್ತಿ.

**ಆ) ತರ್ಕ:** ಕೆಲವರಿಗೆ ಗಣಿತ ಹಾಗೂ ಚೆಸ್ ಇಷ್ಟ, ಪಝುಲ್ ಪರಿಹರಿಸುವುದರಲ್ಲಿ ಆಸಕ್ತಿ.

**ಇ) ದೃಶ್ಯಮಾಧ್ಯಮ :** ಇಂಥವರು ಫೋಟೋಗ್ರಫಿ ಕ್ಷೇತ್ರದಲ್ಲಿ ಆಸಕ್ತಿ ಹೆಚ್ಚು.

**ಈ) ದೈಹಿಕ ಚಟುವಟಿಕೆ:** ಇವರಿಗೆ ವ್ಯಾಯಾಮ, ಯೋಗ, ಕ್ರೀಡೆ, ಜಿಮ್ ಇಷ್ಟ. ಇವರು ಕ್ರೀಡಾಕ್ಷೇತ್ರದಲ್ಲಿ ಆಸಕ್ತರು.

**ಉ)** ಕೆಲವರಿಗೆ **ಸಂಗೀತ, ಕಲೆ, ಚಿತ್ರ, ನಾಟ್ಯ**ದಲ್ಲಿ ಆಸಕ್ತಿ.


**ಊ) ಮಾನವ ಸಂಬಂಧ**ಗಳ ನಿರ್ವಹಣೆಯಲ್ಲಿ ಕೆಲವರು ನಿಸ್ಸೀಮರು. ಇವರು ಸಂಘ-ಸಂಸ್ಥೆಯನ್ನು ನಿರ್ಮಿಸಬಲ್ಲರು.

**ಎ) ಅಂತರ್ಮುಖಿ:** ಕೆಲವರು ಏಕಾಂತ ಪ್ರಿಯರು. ಇವರು ಟೇಬಲ್ ವರ್ಕ್ ಅಥವಾ ಸಂಶೋಧನೆಗೆ ತೊಡಗಬಹುದು.

**ಏ)** ಕೆಲವರಿಗೆ **ಪ್ರಾಣಿ, ಪಕ್ಷಿ**ಗಳ ಕುರಿತಾಗಿ ಹೆಚ್ಚಿನ ಆಸಕ್ತಿ.

**೪. ಕೌಶಲ್ಯ :** ವಿಶ್ವೇಶ್ವರಯ್ಯನವರು ಯುವಕರಿಗೆ ಹೇಳುತ್ತಿದ್ದರು, ''ನೀವು ಕಸ ಗುಡಿಸುತ್ತಿರಬಹುದು. ಆದರೆ, ಸಂಪೂರ್ಣ ಜಗತ್ತಿನಲ್ಲಿ ನನ್ನಷ್ಟು ಚೆನ್ನಾಗಿ ಕಸ ಗುಡಿಸುವವರು ಯಾರೂ ಇರಲು ಸಾಧ್ಯವಿಲ್ಲ ಎಂಬಷ್ಟು ಕೌಶಲ್ಯದಿಂದ ನೀವದನ್ನು ಮಾಡುವಂತಾಗಬೇಕು. ಆಗ ಮಾತ್ರವೇ ನೀವು ನಿಮ್ಮ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ'' ಎಂದು. ಪ್ರತಿಯೊಂದು ಕೆಲಸವನ್ನೂ ಮೇಲು-ಕೀಳೆಂಬ ಭೇದವಿಲ್ಲದೆ, ಕಡಿಮೆ ಸಮಯದಲ್ಲಿ, ಅಚ್ಚುಕಟ್ಟಾಗಿ ಮಾಡುವುದೇ ಕೌಶಲ್ಯ. ಈ ಕೌಶಲ್ಯವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಬೆಳೆಸಿಕೊಳ್ಳಬೇಕು.

**೫. ಬುದ್ಧಿವಂತಿಕೆ:** ಬುದ್ಧಿವಂತಿಕೆ ಎಂದರೆ ಕೇವಲ ಸ್ಮರಣ ಶಕ್ತಿ ಅಲ್ಲ. ಬದಲಾಗಿ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು. ಭಾರತೀಯ ಶಾಸ್ತ್ರಗ್ರಂಥಗಳಾದ ಉಪನಿಷತ್ತು, ಗೀತೆಗಳಲ್ಲಿ ನಾವು ನೋಡುವುದೇನನ್ನು? ಶಿಷ್ಯ ಗುರುವಿಗೆ ಪ್ರಶ್ನಿಸುತ್ತಾನೆ. ಗುರುವಿನ ಉತ್ತರಕ್ಕೆ ಶಿಷ್ಯನು ಮರು ಪ್ರಶ್ನಿಸುತ್ತಾನೆ. ಹೀಗೆ ಪ್ರಶ್ನೆಗಳ ಮೂಲಕ ಶಿಷ್ಯ ಜ್ಞಾನವನ್ನು ಸಂಪಾದಿಸುತ್ತಾನೆ. ಇದೇ ನಿಜವಾದ ಶಿಕ್ಷಣ. ಪ್ರತಿಯೊಂದು ವಿಷಯವನ್ನು ಕುರಿತಾಗಿ 'ಏನು, ಏಕೆ' ಎಂಬ ಪ್ರಶ್ನೆ ಮಾಡುವುದು ಉತ್ತಮ ವಿದ್ಯಾರ್ಥಿಯ ಲಕ್ಷಣವಾಗಿರಬೇಕು. ಆದರೆ ದುರದೃಷ್ಟವಶಾತ್ ಪ್ರಶ್ನೆ ಕೇಳುವ ವಿದ್ಯಾರ್ಥಿಯನ್ನು ನಾವು 'ತಲೆ ಹರಟೆ' ಎಂದು ಬೈದು ಸುಮ್ಮನಾಗಿ ಸುತ್ತೇವೆ. ಇದು ನಮ್ಮ ಶಿಕ್ಷಣ ವ್ಯವಸ್ಥೆಯ ಒಂದು ದೊಡ್ಡ ದೋಷ. ಬದಲಾಗಿ ನಾವು ವಿದ್ಯಾರ್ಥಿಗಳಿಗೆ ಪ್ರಶ್ನೆ ಮಾಡಲು ಪ್ರೋತ್ಸಾಹಿಸಬೇಕು.



**೬. ಭಾವನಾತ್ಮಕತೆ :** ಸಹಮಾನವರ ಕುರಿತಾಗಿ, ಜಗತ್ತಿನ ಪ್ರಾಣಿ-ಸಸ್ಯಗಳ ಕುರಿತಾಗಿ ಕರುಣೆ ಹಾಗೂ ಅನುಕಂಪೆ. ಯಾವ ವ್ಯಕ್ತಿಯು ಬಾಲ್ಯದಿಂದ ಹಿಂಸೆ, ಕೊಲೆ, ಕ್ರೌರ್ಯವನ್ನು ನೋಡುತ್ತ ಬೆಳೆಯುತ್ತಾನೆಯೋ ಆತನಲ್ಲಿ ಈ ಭಾವನಾತ್ಮಕತೆ ಹೊರಟು ಹೋಗುತ್ತದೆ. ಮತ್ತೊಬ್ಬನಿಗೆ ನೋವುಂಟಾದಾಗ ಅದಕ್ಕೆ ಸಹಾನುಭೂತಿ ತೋರುವ ಭಾವಸೂಕ್ಷ್ಮತೆ ನಾಶವಾಗುತ್ತದೆ. ಪರಿಣಾಮ ಸ್ವಸುಖಕ್ಕಾಗಿ, ಏನು ಮಾಡಲೂ ಹೇಸದ ಸಮಾಜ ನಿರ್ಮಾಣವಾಗುತ್ತದೆ. ಪ್ರಸ್ತುತ ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಜನರು ಊಟವಿಲ್ಲದೆ, ಆರೋಗ್ಯವಿಲ್ಲದೆ ಪ್ರಾಣಕ್ಕಾಗಿ ಪರದಾಡುತ್ತಿದ್ದಾಗ, ಎಷ್ಟೋ ಆಸ್ಪತ್ರೆಗಳು ರೋಗಿಯನ್ನು ದಾಖಲಿಸಿಕೊಳ್ಳಲು ಕೇವಲ ಒಂದು ದಿನಕ್ಕೆ ೩೦,೦೦೦ ದಿಂದ ೩೫,೦೦೦ ರೂಪಾಯಿ ಹಣ ಕೀಳಲು ಪ್ರಯತ್ನಿಸುತ್ತಿರುವುದೇ ಈ ಭಾವನಾತ್ಮಕತೆ ಇಲ್ಲದ್ದರ ಪರಿಣಾಮ. ಶಿಕ್ಷಣ ವ್ಯವಸ್ಥೆಯ ಪ್ರಾಥಮಿಕ ಹಂತದಲ್ಲಿ ಪಠ್ಯಪುಸ್ತಕಗಳಿಗಿಂತ ಹೆಚ್ಚಾಗಿ ಅಹಿಂಸೆ, ಪ್ರೇಮ, ಸೇವೆ ಎಂಬಂತಹ ಮೌಲ್ಯಗಳನ್ನು ಬೆಳೆಸಿ ಮಕ್ಕಳಲ್ಲಿ ಭಾವನಾತ್ಮಕತೆ ವೃದ್ಧಿಯಾಗುವಂತೆ ಮಾಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಇತರರ ಸಮಸ್ಯೆಗೆ, ನೋವಿಗೆ ಸ್ಪಂದಿಸುವ, ಸಹಾನು

ಭೂತಿ ತೋರುವ ಮನಸ್ಸುಳ್ಳವನಾಗಬೇಕು.

**೭. ಸಂದರ್ಭ ನಿರ್ವಹಣೆ :** ಸುತ್ತುಮುತ್ತಲಿನ ವಾತಾವರಣ ಹದಗೆಡುತ್ತಿರುವುದನ್ನು ಕಂಡು ಧೃತಿಗೆಡದೆ, ಮುನ್ನುಗ್ಗಿ, ಜವಾಬ್ದಾರಿಯನ್ನು ತೆಗೆದುಕೊಂಡು ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯ. ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಇತರರಿಗೆ ತೊಂದರೆಯಾಗುತ್ತಿರುವಾಗ 'ನನಗೇನು?' ಎಂಬ ನಿರ್ಲಕ್ಷ್ಯವಾಗಲಿ ಅಥವಾ 'ನಾನೇನು ತಾನೆ ಮಾಡಬಲ್ಲೆ?' ಎಂಬ ನಿರಾಶೆಗಾಗಲಿ ಒಳಗಾಗುವುದು ಉತ್ತಮ ವಿದ್ಯಾರ್ಥಿಯ ಲಕ್ಷಣವಲ್ಲ. ಬದಲಾಗಿ, ಸಾವಿರ ಸಮಸ್ಯೆಗಳು ಎದುರಾಗಿ ಬಂದರೂ ಆತ ಪರಿಹಾರ ಸೂಚಿಸುವಂತಿರಬೇಕು. ಕ್ರಿಸ್ತಪೂರ್ವದಲ್ಲಿ ಪಾಶ್ಚಾತ್ಯ ರಾಷ್ಟ್ರದ ಆಕ್ರಮಣಕ್ಕೆ ಭಾರತ ತುತ್ತಾಗುವುದೆಂಬ ಮುನ್ಸೂಚನೆಯನ್ನು ಕಂಡು, ಚಂದ್ರಗುಪ್ತ ಮೌರ್ಯನಂತಹ ಸಾಮ್ರಾಟನನ್ನು ನಿರ್ಮಾಣ ಮಾಡಿ, ಅಖಂಡ ಭಾರತದ ಪರಿಕಲ್ಪನೆ ನೀಡಿದ ಚಾಣಕ್ಯನು ಸಂದರ್ಭ ನಿರ್ವಹಣೆಗೆ ಒಂದು ಅತ್ಯುತ್ತಮ ಉದಾಹರಣೆಯಾಗಿದ್ದಾನೆ.

**೮. ಹಿರಿಯರ ಅನುಭವ :** ವಿದ್ಯೆ ವಿನಯವನ್ನು ನೀಡಬೇಕು. ತಂದೆ-ತಾಯಿಯರ, ಅಜ್ಜ-ಅಜ್ಜಿಯರ, ಹಿರಿಯರ-ಕಿರಿಯರ, ಸಾಧು-ಸಂತರ ಜೀವನಾನುಭವವನ್ನು, ಅವರು ಕಲಿತ ಪಾಠವನ್ನು ತಿಳಿಯುವ ತವಕ ಇರಬೇಕು. ಯಾರು ಪ್ರತಿಯೊಂದು ಪರಿಸ್ಥಿತಿಯಿಂದಲೂ, ಪ್ರತಿಯೊಬ್ಬ ವ್ಯಕ್ತಿಯಿಂದಲೂ, ಸಣ್ಣವರಿಂದ, ದೊಡ್ಡವರಿಂದ, ತನ್ನವರಿಂದ, ಪರರಿಂದ, ಮಿತ್ರರಿಂದ, ಶತ್ರುವಿನಿಂದ ಕಲಿಯಲು ಸಿದ್ಧನಿರುತ್ತಾನೆಯೋ ಅವನೇ ಆದರ್ಶ ವಿದ್ಯಾರ್ಥಿ. ಮಾನವಾಗಲಿ, ಅಪಮಾನವಾಗಲಿ ಅವನಿಗೆ ವಿದ್ಯೆಯಲ್ಲಿಯೇ ಆಸಕ್ತಿ ಇರುತ್ತದೆ.

**೯. 'Vision and Mission in Life' (ಜೀವನದಲ್ಲಿ ಕನಸು ಮತ್ತು ಆದರ್ಶ) :** ಈ ಲೇಖನದ ಪೀಠಿಕೆಯಲ್ಲಿ ಸೂಚಿಸಿದಂತೆ ನಮ್ಮ ಜೀವನಕ್ಕೊಂದು ಸ್ಫೂರ್ತಿ ಇರಬೇಕು. ಉತ್ತಮ ಅಂಕ ಗಳಿಸುವುದು, ಉದ್ಯೋಗ- ಹಣ ಸಂಪಾದಿಸುವುದು — ಇತ್ಯಾದಿಗಳು ತಾತ್ಕಾಲಿಕ ಗುರಿಗಳಷ್ಟೆ. ಶಾಶ್ವತ ಗುರಿ - ಜೀವನದಲ್ಲಿ ಸಂತೃಪ್ತಿ ಹಾಗೂ ಸಾರ್ಥಕತೆ ಸಾಧಿಸುವುದು. ಈ ಕುರಿತಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಆಳವಾಗಿ ಆಲೋಚಿಸಬೇಕು. ಇಲ್ಲವಾದಲ್ಲಿ ತಾತ್ಕಾಲಿಕ ಗುರಿ ಸಾಧಿಸಲಿ ಅಥವಾ ವಿಫಲವಾಗಲಿ, ನಾವು ಕ್ಷಣಿಕ ಸುಖದತ್ತ ತೆರಳಿ ನಮ್ಮ ದೈಹಿಕ-ಮಾನಸಿಕ ಆರೋಗ್ಯವನ್ನು ಹಾಳುಗೆಡುವುತ್ತೇವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನಕ್ಕೊಂದು ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿರಬೇಕು.

**೧೦. ತತ್ತ್ವಬದ್ಧತೆ ಅಥವಾ ವಿಶ್ವಾಸಾರ್ಹತೆ :** ''ನಂಬಿಕೆಗೆ ಅರ್ಹರಾದ ನೂರು ಜನ ಸಿಕ್ಕಿದರೆ ಪ್ರಪಂಚದಲ್ಲೊಂದು ಕ್ರಾಂತಿಯನ್ನೇ ಮಾಡಿಬಿಡಬಹುದು'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ನಮ್ಮನ್ನು ಕಂಡರೆ ನಾಲ್ಕು ಜನಕ್ಕೆ ನಮ್ಮ ಮೇಲೆ ವಿಶ್ವಾಸ ಮೂಡುವಂತಾಗಬೇಕು. ಈ ವ್ಯಕ್ತಿ ಎಂದಿಗೂ ಮೋಸ ಮಾಡಲಾರ, ಎಂತಹ ಪ್ರಲೋಭನೆ ಎದುರಾದರೂ ಆದರ್ಶದಿಂದ ವಿಚಲಿತನಾಗಲಾರ ಎಂಬ ವಿಶ್ವಾಸ ಉಂಟಾಗಬೇಕು. ಸತ್ಯವಾಕ್ಯ ಪರಿಪಾಲನೆ ಈ ವಿಶ್ವಾಸಾರ್ಹತೆಯನ್ನು ತಂದುಕೊಡುತ್ತದೆ.

**೧೧. ಮನೋಬಲ ಅಥವಾ ಇಚ್ಛಾಶಕ್ತಿ :** ಇದರಲ್ಲಿ ೨ ವಿಧ :

ಅ) ಹಿಡಿದ ಕೆಲಸವನ್ನು ಗುರಿ ಮುಟ್ಟುವವರೆಗೂ ಬಿಡದೆ, ಎಷ್ಟೇ ಸಂಕಟ-ತೊಂದರೆ ಬಂದರೂ, ಎಷ್ಟೇ ನಿಂದೆ-ಅವಮಾನಗಳು ಎದುರಾದರೂ ಧೃತಿಗೆಡದೆ ಮಾಡಿಕೊಂಡು ಹೋಗುವ ಛಲ.

ಆ) ಒಂದು ವೇಳೆ ಸಂಪೂರ್ಣ ಪ್ರಯತ್ನ ಮಾಡಿ ವಿಫಲರಾದರೆ, ಆಗ ಇತರರನ್ನು ತನ್ನ ಸೋಲಿಗಾಗಿ ನಿಂದಿಸದೆ, ಸಂಪೂರ್ಣ ಜವಾಬ್ದಾರಿಯನ್ನು ತನ್ನ ಮೇಲೆ ಹೊತ್ತುಕೊಳ್ಳುವ ಹೊಣೆಗಾರಿಕೆ.

ಇಂತಹ ಜವಾಬ್ದಾರಿಯುತ ವ್ಯಕ್ತಿತ್ವವೇ ಶಿಕ್ಷಣದ ಮುಖ್ಯ ಉದ್ದೇಶ.

**೧೨. ಆತ್ಮಸಾಕ್ಷಿ :** ಪ್ರಾಮಾಣಿಕವಾಗಿ ಬದುಕುವುದು. ಭರ್ತೃಹರಿಯ 'ನೀತಿಶತಕ'ದಲ್ಲಿ *(೮೪)* ಹೇಳಿದೆ :

**ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು**
**ಲಕ್ಷ್ಮೀಃ ಸ್ಥಿರಾ ಭವತು ಗಚ್ಛತು ವಾ ಯಥೇಷ್ಟಮ್ ।**
**ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ**
**ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥**

'ನೀತಿನಿಪುಣರು ಹೊಗಳಲಿ ಅಥವಾ ನಿಂದಿಸಲಿ; ಲಕ್ಷ್ಮಿಯು ಬರಲಿ ಅಥವಾ ಹೊರಟು ಹೋಗಲಿ; ಇಂದೇ ಮೃತ್ಯು ಬರಲಿ ಅಥವಾ ಸಹಸ್ರ ವರ್ಷಗಳ ನಂತರ ಬರಲಿ; ಧೀರನಾದವನು ನ್ಯಾಯ ಪಥದಿಂದ ಕಿಂಚಿತ್ತೂ ವಿಚಲಿತನಾಗುವುದಿಲ್ಲ.'

ಎಂದಿಗೂ ನಿರಾಶನಾಗಬೇಡ. ನಿರಾಶೆಗೆ ಕಾರಣವೇ ಇಲ್ಲ. ಕರ್ಮನಿಯಮವನ್ನು ಯಾರೂ ಮೀರಲಾರರು. ನೀನೊಂದು ಒಳ್ಳೆಯ ಕೆಲಸವನ್ನು ಮಾಡಿದರೆ ಅದು ಒಳ್ಳೆಯ ಪರಿಣಾಮವನ್ನು ಉಂಟುಮಾಡಲೇಬೇಕು. ಪವಿತ್ರ ಭಗವನ್ನಾಮವನ್ನು ಭಕ್ತಿಯಿಂದಾಗಲಿ, ಇಲ್ಲದೇ ಇರಲಿ ಹೇಗಾದರೂ ಉಚ್ಚಾರ ಮಾಡಲಿ, ಅದರಿಂದ ಒಳ್ಳೆಯದಾಗಲೇಬೇಕು. ಪ್ರತಿಫಲ ಅನಿವಾರ್ಯ.

— ಸ್ವಾಮಿ ಬ್ರಹ್ಮಾನಂದ